ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 112 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ: | 12-09-2022 |
| ಉತ್ತರಿಸುವ ಸಚಿವರು | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲಸೌಕರ್ಯ ಅಭಿಯಾನದ ಮುಖ್ಯ ಧ್ಯೇಯೋದ್ದೇಶಗಳು ಯಾವುವು; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲಸೌಕರ್ಯ ಅಭಿಯಾನದ ಮುಖ್ಯ ಧ್ಯೇಯೋದ್ದೇಶಗಳು ಈ ಕೆಳಕಂಡಂತಿವೆ:<br>• ಸಾರ್ವತ್ರಿಕ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ತಳಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆಗಳನ್ನು ಬಲಪಡಿಸುವುದು.<br>• ರೋಗ ನಿಗಾವಣೆ ಮತ್ತು ಸಕ್ರಿಯ ಸಮಗ್ರ ಸಮುದಾಯ ಆರೋಗ್ಯ ಶಿಕ್ಷಣ, ಆರೋಗ್ಯದ ಅಪಾಯಗಳ ಅರಿವು ಮೂಡಿಸುವಲ್ಲಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಬಲವರ್ಧನೆ.<br>• ಪ್ರಸ್ತುತವಿರುವ ಮತ್ತು ಮುಂಬರುವ ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಸೂಕ್ತ ಸಮಯದಲ್ಲಿ ನಿರ್ಣಾಯಕ ಆರೈಕೆ ಒದಗಿಸಿ, ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು.<br>• ತೀವ್ರ ನಿಗಾವಣೆ ಮತ್ತು ಸಕ್ರಿಯ ಸಮಗ್ರ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಸುಧಾರಿಸಲು ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಬಲವರ್ಧನೆ<br>• ತಾಲ್ಲೂಕು, ಜಿಲ್ಲೆ, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು<br>• ರೋಗ ನಿಗಾವಣೆ ವ್ಯವಸ್ಥೆಯನ್ನು ಬಲಪಡಿಸಲು ಕಣ್ಗಾವಲು ಪ್ರಯೋಗಾಲಯಗಳನ್ನು ಸ್ಥಾಪಿಸುವುದು ಇದರಿಂದ ತಾಲ್ಲೂಕು ಮಟ್ಟದಲ್ಲಿ ಹಾಗೂ ಮಹಾನಗರಗಳಲ್ಲಿ ರೋಗ ಪತ್ತೆ ಹಾಗೂ ಸಾರ್ವಜನಿಕ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ಸಾರ್ವಜನಿಕ ಆರೋಗ್ಯ ತುರ್ತು ಸಮಸ್ಯೆಗಳನ್ನು ಹಾಗೂ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ನಿಯಂತ್ರಿಸುವುದು.<br>• ಕೋವಿಡ್-19 ಮತ್ತು ಬಯೋಮೆಡಿಕಲ್ ಸೇರಿದಂತೆ ಇತರ ಸಾಂಕ್ರಾಮಿಕ ರೋಗಗಳ ಬಗ್ಗೆ ಸಂಶೋಧನೆಯನ್ನು ಬೆಂಬಲಿಸುವುದು. |

| | | |
|---|---|---|
| (ಆ) | ಈ ಪಂಚವಾರ್ಷಿಕ ಅಭಿಯಾನದ ಅಡಿಯಲ್ಲಿ ರಾಜ್ಯಕ್ಕೆ ಪ್ರತಿವರ್ಷ ದೊರೆಯುವ ಅನುದಾನವೆಷ್ಟು ಹಾಗೂ ಅಭಿಯಾನದ ಅಡಿಯಲ್ಲಿ ರಾಜ್ಯದಲ್ಲಿ ಸ್ಥಾಪಿಸಲಾಗುವ ರಾಷ್ಟ್ರೀಯ ಮತ್ತು ರಾಜ್ಯ ಆರೋಗ್ಯ ಸಂಸ್ಥೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಯಾವುವು(ಪೂರ್ಣ ವಿವರ ನೀಡುವುದು) | ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಯೋಜನೆಯಡಿ 2021-2022 ರಿಂದ 2025-2026 ರವರೆಗೆ ರೂ. 2617.38 ಕೋಟಿಗಳಷ್ಟು ಅನುದಾನ ಲಭ್ಯವಿದ್ದು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದ ಅನುಪಾತ ಕ್ರಮವಾಗಿ 60:40. ಇದರಡಿಯ ಯೋಜನೆ ಹಾಗೂ ಅನುದಾನದ ವಿವರಗಳು ಈ ಕೆಳಕಂಡಂತಿವೆ. |

| | ಕೇಂದ್ರ ಪ್ರಾಯೋಜಿತ ಯೋಜನೆ ವಿವರಗಳು | ರಾಜ್ಯಕ್ಕೆ ಅನುಮೋದಿಸಲಾದ ಘಟಕಗಳ ಸಂಖ್ಯೆ | ಪ್ರಧಾನಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಯೋಜನೆಯಡಿಯಲ್ಲಿ ಅಡಿಯಲ್ಲಿಮಂಜೂರಾದಮೊತ್ತ (ರೂಕೋಟಿಗಳಲ್ಲಿ) | | |
|---|---|---|---|---|---|
| | | | ಕೇಂದ್ರ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | 15 ನೇ ಹಣಕಾಸು ಆಯೋಗದ ಪಾಲು |
| 1. | ನಗರ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು | 926 | 647.09 | 431.40 | 595.50 |
| 2. | ಜಿಲ್ಲಾ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳು | 30 | 36.63 | 24.42 | - |
| 3. | ಕ್ರಿಟಿಕಲ್ ಕೇರ್ ಬ್ಲಾಕ್‌ಗಳು | 30 | 529.41 | 352.94 | - |
| 4. | ಜಿಲ್ಲಾ ಆಸ್ಪತ್ರೆಗಳಲ್ಲಿ 100 ಹಾಸಿಗೆಗಳ ಬ್ಲಾಕ್‌ಗಳು | 3 | 100.57 | 67.05 | - |
| 5. | ಜಿಲ್ಲಾ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳ ಬ್ಲಾಕ್‌ಗಳು | 10 | 186.58 | 124.39 | - |
| 6. | ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 50 ಹಾಸಿಗೆಗಳ ಬ್ಲಾಕ್‌ಗಳು | 17 | 242.25 | 161.50 | - |
| | ಕರ್ನಾಟಕಕ್ಕೆಅನುಮೋದನೆಗೊಂಡ ಒಟ್ಟುಆರ್ಥಿಕವೆಚ್ಚ | | 1213.13 | 808.75 | 595.50 |

1. ಜಿಲ್ಲಾ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳು- ಹಾವೇರಿ, ವಿಜಯಪುರ, ದೊಡ್ಡ ಬಳ್ಳಾಪುರ (ಆರ್ಥಿಕ ವರ್ಷ 2021-22) ಹಾಗೂ ತುಮಕೂರು, ದಾವಣಗೆರೆ, ಕೋಲಾರ, ರಾಮನಗರ, ಯಾದಗಿರಿ, ಉಡುಪಿ (ಆರ್ಥಿಕ ವರ್ಷ 2022-23)

2. ತೀವ್ರ ಆರೈಕೆ ಘಟಕ:

ಅ) ಜಿಲ್ಲಾ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳ ಬ್ಲಾಕ್‌ಗಳು- ಕೋಲಾರ ಜಿಲ್ಲಾ ಆಸ್ಪತ್ರೆ (ಆರ್ಥಿಕ ವರ್ಷ 2021-22) ಹಾಗೂ ಬಾಗಲಕೋಟೆ ಮತ್ತು ಯಾದಗಿರಿ ಜಿಲ್ಲಾ ಆಸ್ಪತ್ರೆ(ಆರ್ಥಿಕ ವರ್ಷ 2022-23)

ಆ) ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 50 ಹಾಸಿಗೆಗಳ ಬ್ಲಾಕ್‌ಗಳು ಚಾಮರಾಜನಗರ ಮತ್ತು ಕಾರವಾರ ಜಿಲ್ಲಾ ಆಸ್ಪತ್ರೆ (ಆರ್ಥಿಕ ವರ್ಷ 2021-22) ಹಾಗೂ ಬೆಳಗಾವಿ, ಕೊಡಗು, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆ(ಆರ್ಥಿಕ ವರ್ಷ 2022-23)

ಇ) 100 ಹಾಸಿಗೆಗಳ ಬ್ಲಾಕ್‌ಗಳು- ತುಮಕೂರು ಜಿಲ್ಲಾ ಆಸ್ಪತ್ರೆ (ಆರ್ಥಿಕ ವರ್ಷ 2022-23)

3. ನಗರ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು (Urban Health and Wellness Centers)- 114 ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರ

| | | |
|---|---|---|
| (ಇ) | ರಾಜ್ಯ ಸರ್ಕಾರ ಈ ಕೇಂದ್ರ ಪುರಸ್ಕೃತ ಯೋಜನೆಗೆ ರಾಜ್ಯವಲಯದ ಯಾವ ಕಾರ್ಯಕ್ರಮಗಳನ್ನು ಜೋಡಣೆ ಮಾಡಿದೆ ಹಾಗೂ ಈ ಅಭಿಯಾನದ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಯೋಜನೆಗೆ ಎಷ್ಟೆಷ್ಟು ಹಣ ವಿನಿಯೋಗ ಮಾಡಲಾಗಿದೆ (ಪೂರ್ಣ ವಿವರ ನೀಡುವುದು) | ಸಾಂಕ್ರಾಮಿಕ ಹಾಗೂ ಅಸಂಕ್ರಾಮಿಕ ರೋಗಗಳ ನಿರ್ವಹಣಾ ಕಾರ್ಯಕ್ರಮ, ಆಯುಷ್ಮಾನ್ ಭಾರತ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು, ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಕಾರ್ಯಕ್ರಮಗಳನ್ನು ಈ ಯೋಜನೆಯಡಿ ಜೋಡಣೆ ಮಾಡಲಾಗಿದೆ. ಅನುದಾನದ ವಿವರ ಕೆಳಕಂಡಂತಿದೆ.<br><br>1. ನಗರ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು (Urban Health and Wellness Centers)-2022-23ನೇ ಆರ್ಥಿಕ ವರ್ಷಕ್ಕೆ ರೂ.39.96 ಕೋಟಿ (114 ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರ) ಅನುದಾನವನ್ನು ವಿನಿಯೋಗಿಸಲು ಒದಗಿಸಲಾಗಿದೆ. |

| | | |
|---|---|---|
| | | 2. ಜಿಲ್ಲಾ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳು (District Integrated Public Health Labs)–2021-22ನೇ ಆರ್ಥಿಕ ವರ್ಷಕ್ಕೆ ರೂ.3.75 ಕೋಟಿಗಳ (3-IPHL) ಹಾಗೂ 2022-23ನೇ ಆರ್ಥಿಕ ವರ್ಷಕ್ಕೆ 7.5 ಕೋಟಿ (6-IPHL) ಅನುದಾನವನ್ನು ವಿನಿಯೋಗಿಸಲು ಒದಗಿಸಲಾಗಿದೆ.<br>3. ತೀವ್ರ ಆರೈಕೆ ಘಟಕ (ಕ್ರಿಟಿಕಲ್ ಕೇರ್ ಬ್ಲಾಕ್‌ಗಳು) ಜಿಲ್ಲಾ ಆಸ್ಪತ್ರೆಗಳಲ್ಲಿ 100 ಹಾಸಿಗೆಗಳ ಬ್ಲಾಕ್‌ಗಳು-2022-23ನೇ ಆರ್ಥಿಕ ವರ್ಷಕ್ಕೆ 47.5 ಕೋಟಿ (1 ತೀವ್ರ ಆರೈಕೆ ಘಟಕ)<br>4. ಜಿಲ್ಲಾ ಆಸ್ಪತ್ರೆಗಳಲ್ಲಿ 50 ಹಾಸಿಗೆಗಳ ಬ್ಲಾಕ್‌ಗಳು-2021-22ನೇ ಆರ್ಥಿಕ ವರ್ಷಕ್ಕೆ ರೂ. 23.75 ಕೋಟಿಗಳು (1-CCB) ಹಾಗೂ 2022-23 ನೇ ಆರ್ಥಿಕ ವರ್ಷಕ್ಕೆ ರೂ.47.5 ಕೋಟಿ (2-CCB) ಅನುದಾನವನ್ನು ವಿನಿಯೋಗಿಸಲು ಒದಗಿಸಲಾಗಿದೆ.<br>5. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 50 ಹಾಸಿಗೆಗಳ ಬ್ಲಾಕ್‌ಗಳು-2021-2ನೇ ಆರ್ಥಿಕ ವರ್ಷಕ್ಕೆ ರೂ. 47.5 ಕೋಟಿ (2-CCB) ಹಾಗೂ 2022-23 ನೇ ಆರ್ಥಿಕ ವರ್ಷಕ್ಕೆ ರೂ.71.25 ಕೋಟಿ (3-CCB) ಅನುದಾನವನ್ನು ವಿನಿಯೋಗಿಸಲು ಒದಗಿಸಲಾಗಿದೆ.<br><br>ಮೇಲಿನ ಅನುದಾನವನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿನಿಯೋಗಿಸಲಾಗುವುದು. |

ಆಕುಕ 138 ಆಕುಕ ಎಸ್‌ಎಂಎಂ 2022

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು